## ನಿಮಗಲ್ಲ...

ಶೀಲಾಗೂ ಪ್ರದೀಪನಿಗೂ ಮದುವೆ ನಿಶ್ಚಯವಾಗಿತ್ತು. ಮದುವೆಗೆ ಒಂದು ದಿನ ಮುಂಚೆ ಶೀಲಾಳಿಂದ ಪ್ರದೀಪನಿಗೆ ಒಂದು ಸಂದೇಶ ಬಂತು. 'ನಾನು ನಿಮ್ಮನ್ನು ಮದುವೆ ಆಗಲು ಆಗುವುದಿಲ್ಲ. ನನ್ನ ಮದುವೆ ಬೇರೆ ಕಡೆ ನಿಶ್ಚಯವಾಗಿದೆ. ದಯವಿಟ್ಟು ಆಗಿದ್ದನ್ನೆಲ್ಲಾ ಮರೆತು ಹಾಯಾಗಿರಿ, ನನ್ನನ್ನು ಕ್ಷಮಿಸಿಬಿಡಿ'. ಪ್ರದೀಪನಿಗೆ ತುಂಬಾ ಚಿಂತೆಯಾಯಿತು. ಏನು ಮಾಡುವುದು ಎಂದು ಆಲೋಚಿಸುತ್ತಿರುವಾಗಲೇ ಶೀಲಾಳಿಂದ ಮತ್ತೊಂದು ಮೆಸೇಜ್ ಬಂತು. 'ಸಾರಿ... ಆ ಮೆಸೇಜ್ ನಿಮಗಲ್ಲ. ತಪ್ಪಾಗಿ ನಿಮಗೆ ಕಳಿಸಿಬಿಟ್ಟೆ' ಪ್ರದೀಪನಿಗೆ ಚಿಂತೆ ಜಾಸ್ತಿ ಆಯ್ತು!

**ಮಂಡ್ಯ ಮ.ನಾ. ಉಡುಪ**





ಕಲೆ: ಗಣೇಶ ಆಚಾರ್ಯ

## ಸರಿ ಉತ್ತರ

ಶಾಲೆಯಲ್ಲಿ ಮೇಷ್ಟ್ರು ಕೇಳುವ ಪ್ರಶ್ನೆಗಳಿಗೆ ಚಿತ್ರವಿಚಿತ್ರ ಉತ್ತರ ಕೊಡುವುದರಲ್ಲಿ ಗುಂಡ ನಿಸ್ಸೀಮ. ಹೀಗಾಗಿ, ಈ ಬಾರಿ ಪ್ರಶ್ನೆಯನ್ನು ಮೇಷ್ಟ್ರು ಮೊಟ್ಟ ಮೊದಲು ಗುಂಡನಿಗೇ ಕೇಳಿದರು. ಪ್ರಶ್ನೆ ಸರಳವಾಗಿತ್ತು. 'ಗಂಡಾಂತರಕಾರಿ ಕೆಲಸ ಇದನ್ನು ಇಂಗ್ಲಿಷ್‌ಗೆ ಅನುವಾದ ಮಾಡಿ ಹೇಳು' ಎಂದರು. ತಕ್ಷಣ ಆಲೋಚನೆಯಲ್ಲಿ ತೊಡಗಿದ ಗುಂಡ, 'Husband brings vegetable' ಎಂದು ಹೇಳಿದ. ಉತ್ತರ ಸರಿಯೊ ತಪ್ಪೊ ಎನ್ನುವುದನ್ನು ನಿರ್ಧರಿಸಲಾಗದೆ ಮೇಷ್ಟ್ರು ಬೆಪ್ಪಾದರು.

**ಸುವರ್ಣಾ ಚಿದಾನಂದ**